# ಅರಮನೆಯಲ್ಲಿ ಮೊಳೆಯಿತು ಹೊಸ ಕನಸು!



ಸ್ವಲ್ಪ ಹೊತ್ತಿನಲ್ಲೇ ಎಲ್ಲ ಕಡೆಯ ಗದ್ದೆಯ ಕೆಲಸದ ವಿಹಂಗಮ ನೋಟವನ್ನು ಮುಗಿಸಿಕೊಂಡು ಊಟಕ್ಕೆಂದು ಶುದ್ಧೋದನರು ನಾವೆಲ್ಲ ಇದ್ದಲ್ಲಿಗೆ ಬಂದರು. ಕುದುರೆಯನ್ನು ಮರದಡಿ ನಿಲ್ಲಿಸುವ ಮೊದಲೇ ಸಿದ್ಧಾರ್ಥ ತಂದೆ ಬಳಿ ಹೋಗಿ ತನ್ನ ತಾಯಿಯ ವಿಚಾರ ಕೇಳುತ್ತಾನೆಂದುಕೊಂಡೆ. ಆದರೆ ಆತ ಹಾಗೆ ಮಾಡಲಿಲ್ಲ. ಬದಲಾಗಿ ದೇವದತ್ತನೇ ತನ್ನ ತಾಯಿ ಅಮಿತಾಳೊಂದಿಗೆ ತೆರಳಿ, ‘ಮಾವ, ನಾನು ಹೊಡೆದುರುಳಿಸಿದ ಹಕ್ಕಿಯನ್ನು ಸಿದ್ಧಾರ್ಥ ಲಪಟಾಯಿಸಿ, ತನ್ನದೆಂದು ವಾದ ಮಾಡುತ್ತಿದ್ದಾನೆ. ನನ್ನ ಪಕ್ಷಿಯನ್ನು ನನಗೆ ಕೊಡಿಸಿ’ ಎಂದು ದೂರಿದ.

ಸಿದ್ಧಾರ್ಥನ ಕಾರುಣ್ಯ ಗುಣದ ಬಗ್ಗೆ ಮೊದಲಿನಿಂದಲೂ ತಿಳಿದಿದ್ದ ಶುದ್ಧೋದನರು ದುಡುಕದೇ, ಇಬ್ಬರನ್ನೂ ಮರದಡಿಗೆ ಕರೆಸಿಕೊಂಡು ವಿಚಾರಿಸಿದರು. ಇಬ್ಬರೂ ತಮ್ಮ ತಮ್ಮ ಅದೇ ವಾದವನ್ನು ಮುಂದಿಟ್ಟರು. ತಾವು ಈ ವಿಚಾರದ ತೀರ್ಪನ್ನು ಕೊಟ್ಟರೆ ಪಕ್ಷಪಾತ ಮಾಡಿದಂತಾಗುತ್ತದೆಂದು ಸಮಜಾಯಿಷಿ ಹೇಳಿ, ನಿಷ್ಪಕ್ಷಪಾತಿಯೆಂದು ಹೆಸರಾಗಿರುವ ಊರ ಪ್ರಮುಖ ಪಂಚಾಯಿತಿದಾರರೊಬ್ಬರನ್ನು ನ್ಯಾಯ ನಿರ್ಣಯಕ್ಕಾಗಿ ನೇಮಿಸಿದರು. ಅವರು ಊರ ಮುಂದಿನ ಅರಳೀಮರದಡಿಯ ಕಟ್ಟೆಯ ಮೇಲೆ ಸಂಜೆ ವೇಳೆ ನ್ಯಾಯ ಪರಿಹರಿಸುವುದು ವಾಡಿಕೆಯಾಗಿತ್ತು. ಅಲ್ಲಿಯವರೆಗೂ ಸಿದ್ಧಾರ್ಥ ಆ ಪಕ್ಷಿಯನ್ನು ತನ್ನೆದೆಗೇ ಒರಗಿಸಿಕೊಂಡು ಕಾಲಕಾಲಕ್ಕೆ ನೀರು, ಆಹಾರ, ಔಷಧಿ ಒದಗಿಸಿ ಆರೈಕೆ ಮಾಡುತ್ತಿದ್ದ.

ನಿಷ್ಪಕ್ಷಪಾತ ನಿರ್ಣಯ ನೀಡಲೆಂದು ಶುದ್ಧೋದನರು ಆ ಸಭೆಗೆ ಗೈರಾಗಿದ್ದರು. ಸಿದ್ಧಾರ್ಥನ ಪರವಾಗಿ ನಾನೊಬ್ಬಳೇ! ಆದರೆ ದೇವದತ್ತನ ಪರವಾಗಿ ಎಷ್ಟೊಂದು ಜನ! ಆತನ ತಂದೆ, ತಾಯಿ ಅಮಿತಾ, ಚಿಕ್ಕಮ್ಮ ಪಮಿತಾ, ಆಕೆಯ ಗಂಡ ದಂಡಪಾಣಿ ಸುಪ್ರಬುದ್ಧ... ಇಬ್ಬರೂ ತಮ್ಮ ವಾದ ಪ್ರತಿವಾದಗಳನ್ನು ಮಂಡಿಸಿದರು. ಅರಳು ಹುರಿದಂತೆ ಪಟಪಟನೇ ಮಾತನಾಡುತ್ತಲೇ, ಮುತ್ತು ಪೋಣಿಸಿದಂತೆ ಮಾತಿಗೆ ಮಾತು ಸೇರಿಸುವ ಸಿದ್ಧಾರ್ಥನ ಕಲೆಗಾರಿಕೆಯ ಮುಂದೆ ದೇವದತ್ತನ ವಿತಂಡವಾದ ನಡೆಯಲಿಲ್ಲ. ಸಿದ್ಧಾರ್ಥನ ಅಂತಃಕರಣದ ಪ್ರತಿಬಿಂಬವನ್ನು ಗ್ರಹಿಸಿದ ನ್ಯಾಯ ಪಂಚಾಯಿತಿಯ ತೀರ್ಪುದಾರ, ‘ಯಾರು ಬೇಕಾದರೂ ಪ್ರಾಣಿ, ಪಕ್ಷಿಗಳನ್ನು ಸುಲಭವಾಗಿ ಕೊಂದುಬಿಡಬಹುದು, ಆದರೆ ಅದಕ್ಕೆ ಜೀವವನ್ನು ಕೊಡಲು ಸಾಧ್ಯವಿಲ್ಲ. ಯಾರು ಆ ಪ್ರಾಣಿ–ಪಕ್ಷಿಯನ್ನು ಪಾಲನೆ ಪೋಷಣೆ ಮಾಡಿಲ್ಲವೋ ಅವರಿಗೆ ಅದನ್ನು ಕೊಲ್ಲುವ ಹಕ್ಕಿಲ್ಲ. ಆದ್ದರಿಂದ ಯಾರು ಜೀವಿಯನ್ನು ರಕ್ಷಿಸುತ್ತಾರೋ ಅವರೇ ಅದರ ನಿಜವಾದ ಪಾಲಕರೇ ಹೊರತು ಕೊಲ್ಲುವವರಲ್ಲ...’ ಎಂದು ತೀರ್ಪಿತ್ತು ಬಿಟ್ಟರು! ಇದರಿಂದ ದೇವದತ್ತನಿಗೆ ನಖಶಿಖಾಂತ ಉರಿದುಹೋಯಿತು. ಆತನ ಹಿಂಬಾಲಕರಾಗಿ ಬಂದಿದ್ದವರಿಗೂ ಅವಮಾನವಾಯಿತು. ಎಲ್ಲಿ ಅವರೆಲ್ಲರೂ ಸಿದ್ಧಾರ್ಥನ ಮೇಲೆ ಕೈ ಮಾಡಿಬಿಡುತ್ತಾರೋ ಎಂದು ಹೆದರಿ, ಸಿದ್ಧಾರ್ಥ ಆ ಪಕ್ಷಿಯನ್ನು ಪೋಷಣೆ ಮಾಡಿದಂತೆಯೇ ನಾನೂ ಸಿದ್ಧಾರ್ಥನನ್ನು ಪಕ್ಕದಲ್ಲೇ ಸೀರೆಯ ಮರೆಯಲ್ಲಿ ಇರುಕಿ ನಡೆಸಿಕೊಂಡು ರಕ್ಷಿಸುತ್ತ ಮನೆಗೆ ಕರೆದುಕೊಂಡು ಬಂದೆ. ಬಂದವಳು ನ್ಯಾಯದ ವಿವರಗಳನ್ನು ಶುದ್ಧೋದನರಿಗೆ ವಿವರಿಸಿದೆ. ಅವರೂ ಧರ್ಮಸಮ್ಮತವಾದ ನಿರ್ಣಯವನ್ನೇ ಕೊಟ್ಟಿದ್ದಾರೆ ಎಂದು ಶ್ಲಾಘಿಸಿದರು.

ಇದು ತನಗಾದ ಸೋಲು, ಅವಮಾನವೆಂದು ಭಾವಿಸಿದ ದೇವದತ್ತ ಅಲ್ಲಿಂದ ಮುಂದಕ್ಕೆ ಸಿದ್ಧಾರ್ಥನನ್ನು, ಪ್ರತಿಸ್ಪರ್ಧಿ ಎಂದುಕೊಳ್ಳುವುದಕ್ಕಿಂತ, ವೈರಿ ಎಂದೇ ಭಾವಿಸಲಾರಂಭಿಸಿದ. ಈ ಘಟನೆಯ ನಂತರ ಗೆದ್ದೆನೆಂದು ಬೀಗುವ ಬದಲು ಸೋತವನಿಗಿಂತಲೂ ಹೆಚ್ಚು ಅಂತರ್ಮುಖಿಯಾದ ಸಿದ್ಧಾರ್ಥ. ‘ಬೇಟೆಯಾಡುವುದು ತಪ್ಪಲ್ಲವೇ ಅಮ್ಮ?’ ಎಂದು ಕೇಳುತ್ತಿದ್ದ.

‘ಬೇಟೆಯಾಡುವುದು, ಮುಂದೆ ಯುದ್ಧಗಳಲ್ಲಿ ಚಲಿಸುತ್ತಿರುವ ಎದುರಾಳಿಯನ್ನು ನಿಖರವಾಗಿ ಗುರಿಯಾಗಿರಿಸಿ ಕೊಲ್ಲಲು ನಡೆಸುವ ಪ್ರಾಯೋಗಿಕ ತರಬೇತಿ ಮಗು’ ಎಂದರೆ, ‘ಜಿಂಕೆ, ಕಡವೆ, ಹಂದಿಗಳಂಥ ಅಮಾಯಕ ಪ್ರಾಣಿಗಳನ್ನು ಬೇಟೆಯಾಡುವುದು ಅದೆಂಥ ಪುರುಷಾರ್ಥ. ಅವೇನೂ ನಮ್ಮ ಮೇಲೆ ತಿರುಗಿ ಬೀಳುವುದಿಲ್ಲ. ಮೇಲಾಗಿ ಅವುಗಳು ನಮ್ಮಂತೆ ಶಸ್ತ್ರಾಸ್ತ್ರಗಳನ್ನೇನೂ ಬಳಸುವುದಿಲ್ಲವಲ್ಲ. ಹಾಗಾಗಿ ಇದು ಏಕಮುಖಿ ದಬ್ಬಾಳಿಕೆ ಅಲ್ಲವೇ? ತಾಕತ್ತಿದ್ದರೆ ಒಬ್ಬೊಬ್ಬರೇ ಹುಲಿ, ಆನೆ, ಚಿರತೆ, ಸಿಂಹದಂಥ ವನ್ಯಮೃಗಗಳ ಎದುರು ನಿಂತು ಶಸ್ತ್ರಾಸ್ತ್ರಗಳ ನೆರವಿಲ್ಲದೇ ಹೋರಾಡಬೇಕು. ಅದು ನಿಜವಾದ ಪರಾಕ್ರಮ’ ಎಂದು ಸವಾಲು ಹಾಕುತ್ತಿದ್ದ. ನಾನು ಅವನ ವಾದ ಸರಣಿಗೆ ಅಗತ್ಯವಾದಷ್ಟು ಜ್ಞಾನವುಳ್ಳವಳಾಗಿಲ್ಲವೆಂದೂ, ತಂದೆಯವರಲ್ಲಿ ಕೇಳುವಂತೆಯೂ ಹೇಳಿದೆ.

ಒಮ್ಮೆ ಅವರ ಮುಂದೆಯೇ, ‘ಮನುಷ್ಯ ಈ ಭೂಮಿಯ ಮೇಲಿನ ಸಕಲ ಚರಾಚರಗಳೂ ಕೇವಲ ತನಗೋಸ್ಕರವೇ ಇರುವುದು ಎಂದು ಭಾವಿಸಿಬಿಟ್ಟಿದ್ದಾನೆ. ಮನುಷ್ಯನಿಗಿಂತಲೂ ಮೊದಲೇ ಈ ಭೂಮಿಯ ಮೇಲೆ ಪ್ರಾಣಿ, ಪಕ್ಷಿಗಳು ಅವತರಿಸಿದ್ದವು ತಾನೇ. ಅಂದ ಮೇಲೆ ಈ ಭೂಮಿಯ ಮೇಲೆ ಅವಕ್ಕೇ ನಮಗಿಂತಲೂ ಹೆಚ್ಚಿನ ಅಧಿಕಾರವಿರುವುದು. ನಾವು ಅವುಗಳ ಹಕ್ಕಿನ ಮೇಲೆ ದುರಾಕ್ರಮಣ ಮಾಡುತ್ತಿದ್ದೇವೆ, ಇದು ತಪ್ಪು. ಇದನ್ನು ಕೊನೆಗಾಣಿಸಬೇಕು’ ಎಂದು ಬೇಟೆಯಾಡುವುದನ್ನು, ಪ್ರಾಣಿ ಹತ್ಯೆ ಮಾಡಿ ತಿನ್ನುವುದನ್ನು ನಿರ್ಬಂಧಿಸಬೇಕು